# ಭಕ್ತಿ, ದಾಸ್ಯ ಮತ್ತು ಸ್ವಾತಂತ್ರ್ಯ

ಭಕ್ತಿ ಎಂದರೆ ದೇವರ ದಾಸ್ಯವನ್ನು ಅಂಗೀಕರಿಸಿದ, ದಾಸ್ಯವನ್ನು ಸರ್ವಾತ್ಮನಾ ಆಯ್ಕೆ ಮಾಡಿಕೊಂಡ ಸ್ಥಿತಿ. ದೇವರ ದಾಸನಾದವನು, ದಾಸಿಯಾದವಳು ಲೋಕದ ದಾಸ್ಯದಿಂದ ಬಿಡುಗಡೆ ಪಡೆದಂತೆ ಆಗಿಬಿಡುವುದೆಂಬ ಮಾತನ್ನು ಈ ಅಂಕಣದಲ್ಲಿ ಈ ಹಿಂದೆಯೇ ಅರಿಕೆ ಮಾಡಿಕೊಂಡಿದ್ದೆ. ನಮ್ಮ ಮನಸ್ಸು ಲೋಕದ ದಾಸ್ಯದಿಂದ ಬಿಡುಗಡೆ ಪಡೆಯದೆ ಈ ಲೋಕದಲ್ಲಿ ನಿಜವಾಗಿ ಬದುಕುವುದಕ್ಕೆ ಸಮರ್ಥವಾಗದು ಎನ್ನುವುದು ಭಕ್ತಿಯೆ; ಆಧ್ಯಾತ್ಮಿಕತೆಯ ಒಳನೋಟವಾಗಿದೆ. ನಿಜವಾಗಿ ಬದುಕುವುದೆಂದರೆ ಆಂತರಿಕ ಸ್ವಾತಂತ್ರ್ಯದಿಂದ ಬದುಕುವುದು. ನಮ್ಮೊಳಗಿನ ಸತ್ಯದ ಕೆಚ್ಚನ್ನು ನಾವೇ ಅನುಭವಿಸುತ್ತ ಬದುಕುವುದು. ನಿಜಕ್ಕಾದರೆ ಲೋಕದ ದಾಸ್ಯಕ್ಕೆ ಒಳಗಾದದ್ದೇ ಅರಿವಿಗೆ ಬಂದಿಲ್ಲವೆಂಬಂತೆ ನಾವು ಬದುಕುತ್ತಿದ್ದೇವೆ. ಲೋಕದ ಪ್ರಭಾವ ನಮ್ಮ ಮನಸ್ಸಿನ ಮೇಲೆ ಅಷ್ಟು ದಟ್ಟವಾಗಿದೆ. ಮೊದಲನೆಯದಾಗಿ, ಲೋಕ ಮೆಚ್ಚುವಂತೆ, ಲೋಕ ನಮ್ಮನ್ನು ಗುರುತಿಸುವಂತೆ ಬದುಕಬೇಕೆನ್ನುವುದೇ ನಮ್ಮ ಮೌಲ್ಯವಾಗಿದೆ. ಇದರಲ್ಲಿ ತಪ್ಪೇನಿದೆ, ಇದು ಸಹಜವಲ್ಲವೆ; ಲೋಕಕುಟುಂಬದಲ್ಲಿ ಬದುಕಲೇಬೇಕಿರುವ ನಾವು ಈ ಮೌಲ್ಯವನ್ನು ಆದರಿಸುವುದರಲ್ಲಿ ಏನು ತಪ್ಪು ಎಂದು ಕೂಡ ನಮ್ಮ ಮನಸ್ಸೇ ಪ್ರತಿ–ಪ್ರಶ್ನೆಯನ್ನೂ ಕೇಳಬಹುದು. ಇವೆಲ್ಲ ನಿಜ. ಆದರೆ ಲೋಕ ಮೆಚ್ಚುವಂತೆ, ಲೋಕ ನಮ್ಮನ್ನು ಒಪ್ಪುವಂತೆ ಬದುಕಬೇಕು ಎನ್ನುವಾಗ, ನಾವು ನಿಜವಾಗಿ ಇರುವಂತೆ, ನಮ್ಮನ್ನು ನಾವೇ ಒಪ್ಪುವಂತೆ ಬದುಕಬೇಕೆನ್ನುವ, ಲೋಕ ನಮ್ಮನ್ನು ಒಪ್ಪುವುದು ಬೇರೆ– ನಮ್ಮನ್ನು ನಾವೇ ಒಪ್ಪುವುದು ಬೇರೆ ಎನ್ನುವ ಸೂಕ್ಷ್ಮಗಳೆಲ್ಲ ಕಳೆದುಹೋಗುತ್ತವೆ. ಇಂಥ ಸ್ಥಿತಿಯಲ್ಲಿ ಲೋಕವು ನಮಗೆ ಪ್ರಮಾಣವಾಯಿತು. ನಮ್ಮದೇ ಸ್ವ–ಪ್ರಮಾಣ ಕಳೆದುಹೋಯಿತು! ಅಥವಾ ಅದು ಲೋಕ ಪ್ರಮಾಣದ ಅಧೀನವಾಯಿತು. ನಾವು ಇರುವುದಕ್ಕಿಂತ ಲೋಕಕ್ಕೆ ನಮ್ಮನ್ನು ತೋರಿಸುವುದೇ ಹೆಚ್ಚು ಮುಖ್ಯವಾಗಿಬಿಟ್ಟಿತು. ತೋರಿಕೆಯ ಗುಣ ಬೆಳೆಯಿತು. ಆಚಾರಕ್ಕಿಂತ ಪ್ರಚಾರವೇ ಬದುಕಾಯಿತು. ನೀನು ನಮ್ಮ ಸದಸ್ಯ ಎಂದು ಲೋಕವು ನಮ್ಮನ್ನು ಗುರುತಿಸಿದ್ದಲ್ಲಿಂದಲೇ ನಮ್ಮ ಪ್ರಜ್ಞೆಯ ಹರಿವು, ಚಿತ್ತವೃತ್ತಿಗಳ ಹರಿವು ಪ್ರಾರಂಭವಾದುದಾಗಿ, ಆ ಹರಿವಿನ ಜಾಡಿನಲ್ಲಿಯೇ ಪ್ರಜ್ಞೆಯು ಲೋಕದ ಕಡೆಗೇ ಹರಿಯುತ್ತ, ತೀರ ಬಹಿರ್ಮುಖವಾಗಿ, ತನ್ನನ್ನು ಲೋಕದ ದಾಸ್ಯಕ್ಕೆ ತನಗರಿವಿಲ್ಲದೇ ಕೊಟ್ಟುಕೊಂಡಿತು. ಇದು ನಮ್ಮೆಲ್ಲರ ಕಥೆ. ಇಲ್ಲಿ ಹುಟ್ಟಿಬಂದ ಮನುಷ್ಯ ಜೀವಿಯ ಕಥೆ. ಪೂರ್ವಾರ್ಧದ ಕಥೆ. ಪೂರ್ವಾರ್ಧ ಎನ್ನುವುದೇಕೆಂದರೆ– ಉತ್ತರಾರ್ಧವೂ ಒಂದು ಇರಬಹುದು ಎನ್ನುವ ದೂರದ ಆಸೆಯಿಂದ. ಅಲ್ಲದೆ ಮನುಷ್ಯನ ಕಥೆ ಪ್ರಾಯಃ ಮುಕ್ತಾಯವಿಲ್ಲದ ಕಥೆ! ಪ್ರಳಯವೇ ಆಯಿತು ಎಂಬಲ್ಲಿಗೂ– ಆ ಮೇಲೆ? ಎನ್ನುವ ಪ್ರಶ್ನೆ ಅಲ್ಲಿಯೇ ಹುಟ್ಟುವುದರಿಂದ!

ಆದರೆ ಇದರಿಂದೆಲ್ಲ ಏನಾಯಿತೆಂದರೆ– ಲೋಕ ನಮ್ಮನ್ನು ಮೆಚ್ಚುವಂತೆ ಮಾಡುವುದೇ ನಮ್ಮೆಲ್ಲರ ಏಕಮೇವ ಮೌಲ್ಯವಾಯಿತು. ಎಷ್ಟು ಹೆಚ್ಚು ಜನ ನಮ್ಮನ್ನು ಮೆಚ್ಚುವಂತಾದರೆ ಅಷ್ಟು ಹೆಚ್ಚು ನಾವು ಬದುಕಿನಲ್ಲಿ ಯಶಸ್ವಿಗಳು. ಹಾಗೆಂದು ನಾವೇ ನಮ್ಮ ಬೆನ್ನು ತಟ್ಟಿಕೊಳ್ಳುವೆವು. ಲೋಕ ಯಾವುದನ್ನು ಮೆಚ್ಚುತ್ತವೆ ಎಂದು ಸೂಕ್ಷ್ಮವಾಗಿ ತಿಳಿದುಕೊಂಡು ಅದರಂತೆ ಆ ದಾರಿಯನ್ನು ತುಳಿಯುವೆವು. ಲೌಕಿಕ ವಿದ್ಯಮಾನ ಈ ಮಟ್ಟಕ್ಕೆ ಬಂದು ಮುಟ್ಟುವಾಗ– ತೀವ್ರವಾಗಿ ಗಾಸಿಗೊಳ್ಳುವುದು ನಮ್ಮ ಆಳದ ವ್ಯಕ್ತಿತ್ವ; ನಮ್ಮ ಅಂತಃಕರಣ ನಮ್ಮ ಆತ್ಮ.

ಆದುದರಿಂದಲೇ ಲೋಕದಲ್ಲಿ ನಾವು ಕಂಡ ಸತ್ಯವನ್ನು ನಾವು ಹೇಳಲಾರದವರಾಗಿರುವೆವು. ಏಕೆಂದರೆ ಅದು ಲೋಕಕ್ಕೆ ಮೆಚ್ಚಿಕೆಯಾಗುವುದಿಲ್ಲವಾಗಿ. ಅಲ್ಲದೆ, ಸತ್ಯವನ್ನು ಹೇಳಿದರೆ ಬಲಿಷ್ಠರ ವಿರೋಧವನ್ನು ಕಟ್ಟಿಕೊಳ್ಳಬೇಕಾದ ಹೆದರಿಕೆಯೂ ನಮ್ಮನ್ನು ತೀವ್ರವಾಗಿ ಕಾಡುವುದು. ಒಂದೆಡೆ ಮೆಚ್ಚಿಕೆಯ ಆಸೆ, ಇನ್ನೊಂದೆಡೆ ನಮ್ಮ ಸ್ವಾರ್ಥದಿಂದಲೇ ನಮ್ಮಲ್ಲುಂಟಾಗಿರುವ ಹೆದರಿಕೆ. ಇವೆರಡರಿಂದಾಗಿ ನಾನು ಕಂಡ ಸತ್ಯ, ನಮ್ಮಲ್ಲಿಯೇ ಅಡಗಿಕೊಳ್ಳುವುದು. ರೆಕ್ಕೆಪುಕ್ಕ ಕತ್ತರಿಸಲ್ಪಟ್ಟ ಪಂಜರದೊಳಗಿನ ಹಕ್ಕಿಯಂತೆ ನೀಲಾಗಸವನ್ನು ನೋಡಿ ನಿಟ್ಟುಸಿರು ಬಿಡುವುದಷ್ಟೆ ಅದರ ಪಾಡು! ಲೋಕ ಹೀಗಿದ್ದೂ, ನಮ್ಮನ್ನು ಇಷ್ಟು ಗಾಸಿಗೊಳಿಸಿದರೂ, ಇಂಥ ಲೋಕ ಒಂದೊಮ್ಮೆ ನಮ್ಮನ್ನು ಮೆಚ್ಚಿಬಿಟ್ಟರೆ ಅದೆಷ್ಟು ಉಬ್ಬಿ ಹೋಗುವೆವು! ಇದು ಸಾಮಾನ್ಯವಾಗಿ ನಮ್ಮೆಲ್ಲರ ಪಾಡು.

ಈ ಪಾಡಿಗಿಂತ ಪೂರ್ತಿಯಾಗಿ ಬೇರೆಯಾದ, ಇಡಿಯಾಗಿ ಗುಣಾತ್ಮಕವಾಗಿ ಬೇರೆಯಾದ ಆಂತರಿಕ ವಿದ್ಯಮಾನವೇ 'ಭಕ್ತಿ'. 'ಭಕ್ತಿ' ಎಂದರೆ 'ಶರಣಾಗತಿ' ಎಂದುಕೊಳ್ಳಬಹುದು. ದೇವರಿಗೆ ಶರಣಾದರೆ ಲೋಕದಲ್ಲಿ ತಮ್ಮ ಆತ್ಮಕ್ಕೆ ಗಾಸಿಯಾಗದಂತೆ ಬದುಕುವರು. ಆ ಮೂಲಕ, ಲೋಕ ನನ್ನ ಮನಸ್ಸನ್ನು ತಾನೇ ಗಾಸಿಗೊಳಿಸಿಕೊಳ್ಳುತ್ತಿದೆ ಎಂಬ ಅರಿವನ್ನು ಸೂಕ್ಷ್ಮವಾಗಿ ಲೋಕಕ್ಕೆ ಉಂಟು ಮಾಡುವಂತೆ ಬದುಕುವರು. ಆ ಉದ್ದೇಶವಿಲ್ಲದೆಯೇ, ಲೋಕದಲ್ಲಿ ಸೂಕ್ಷ್ಮಜ್ಞತೆಯನ್ನು ಬೆಳೆಸುವರು. ಮುಖ್ಯವಾಗಿ ಭಕ್ತರು ತಮ್ಮ ಪಾಡನ್ನು ಮುಚ್ಚಿಡುವುದಿಲ್ಲ. ಎಲ್ಲವನ್ನೂ ತಮ್ಮ ಒಡೆಯನ ಮುಂದೆ ತೋಡಿಕೊಳ್ಳುವರು. 'ಒಡೆಯಗೆ ಒಡಲನು ತೋಡುವೆ' ಎನ್ನುವರು. ತಮ್ಮ ಮನಸ್ಸು ಇನ್ನೂ ಲೋಕದ ಕ್ಷಣಿಕ ಭೋಗ ಭಾಗ್ಯಗಳಿಗಾಗಿ ಮಿಡಿಯುತ್ತಿದೆ ಎನ್ನುವ ಕೊರಗಿನಿಂದ ಅದನ್ನೆಲ್ಲ ತಮ್ಮೊಳಗಿನ ದೇವರ ಮುಂದೆ ಹೇಳಿಕೊಳ್ಳುವರು. ಭಕ್ತರಲ್ಲಿ ತೋರಿಕೆಯ ಗುಣವೇ ಇಲ್ಲ. ಏಕೆಂದರೆ ಅವರ ಸತ್ಯ ಅವರ ದೇವರು ಅವರ ಒಳಗಡೆಯೇ ಇದ್ದಾನೆ! ನಿನ್ನ ಹೃದಯದಲ್ಲಿ ನಾನಿದ್ದೇನೆ ಎಂದು 'ಕೃಷ್ಣ' ಸುಮ್ಮನೆ ಹೇಳಿಲ್ಲ! ಕೃಷ್ಣನ ಮಾತಿನ ಪರಿಣಾಮವಿದು. ತೋರಿಕೆಯ ಗುಣವೇ ಹೊರಟು ಹೋಗುವುದು! ಹೊರಟು ಹೋದಂತೆ, ಇರುವಿಕೆಯ ಅರಿವು ನಿಧಾನವಾಗಿ ತೆರೆದು ಕೊಳ್ಳುವುದು.

ಅಲ್ಲದೆ, ತನ್ನ ದೋಷ, ದೌರ್ಬಲ್ಯಗಳನ್ನು ದೇವರ ಮುಂದೆ ಮಾತ್ರ ತೋಡಿಕೊಳ್ಳುವುದು ಸಾಧ್ಯ. ಏಕೆಂದರೆ, ದೇವರೆಂದರೆ, ಯಾರ ದೌರ್ಬಲ್ಯಗಳನ್ನೂ ತನಗಾಗಿ ದುರ್ಬಳಕೆ ಮಾಡಿಕೊಳ್ಳದ ಶುದ್ಧ ಸತ್ವ. ಲೋಕದ ಮುಂದೆ ಹೀಗೆ ಹೇಳುವಂತಿಲ್ಲ. ಇತರರ ದೌರ್ಬಲ್ಯಗಳನ್ನು ತನಗಾಗಿ ಬಳಕೆ ಮಾಡಿಕೊಳ್ಳುವುದೇ ಲೋಕದ ಗುಣ. ಆದುದರಿಂದ, ತನ್ನ ದೋಷವನ್ನು ಹೇಳುತ್ತಲೇ ದೇವರ ನಿರ್ದೋಷ ಗುಣ ಭಕ್ತರಿಗೆ ಹೊಳೆಯುವುದು! ತನ್ನ ದೋಷವನ್ನು ಮುಚ್ಚಿಡುವ ತೋರಿಕೆಗೆ ಈ ಹೊಳಹಿನ ಭಾಗ್ಯವಿಲ್ಲ.

ತನ್ನ ದೌರ್ಬಲ್ಯಗಳನ್ನು ಹೇಳಿ ಕೊಂಡಂತೆ ಮನಸ್ಸು ನಿರಾಳವಾಗುವುದು. ಅಂದರೆ ಇದೊಂದು ಸ್ವಯಂ ಚಿಕಿತ್ಸೆ. ದೇವರೊಂದು ನೆಪ ಮಾತ್ರ! ಎಲ್ಲವನ್ನೂ ಮಾಡಬಲ್ಲ 'ಒಡೆಯ' ತಾನೊಂದು ನೆಪಮಾತ್ರವಾಗಿ ಇರುವ ವಿಸ್ಮಯವೂ ಭಕ್ತರನ್ನು ಆವರಿಸಿ ಹೃದಯವನ್ನು ಇನ್ನಷ್ಟು ಕರಗಿಸುವುದು. ಅಲ್ಲದೆ, ದೇವರೊಡನೆ ಆಡುವ ಮಾತೇ ಆದರೂ ಅದು ಒಂದು ಭಾಷೆಯಲ್ಲಿ ನಿಯಮಬದ್ಧವಾಗಿರುವುದರಿಂದ ಆ ಭಾಷೆಯನ್ನಾಡುವ ಲೋಕದ ಮುಂದೆ ತನ್ನ ಭಕ್ತರನ್ನು ದೇವರೇ ಪ್ರಕಟಿಸಿದಂತೆ ಆಗಿ, ಭಕ್ತನಿಗೆ ಒಂದು ಅರ್ಥದಲ್ಲಿ ಲೋಕವೇ ದೇವರಾದಂತೆಯೂ ಆಗುವುದು. ಲೋಕಕ್ಕಾದರೋ ಭಕ್ತನ ಮಾತು ತನ್ನೊಳಗಿನ ಮಾತೂ ಆಗಿರುವುದರಿಂದ ಒಬ್ಬನು ದೇವರನ್ನು ನಿಜವಾದ ಆರ್ತತೆಯಿಂದ ಕೂಗಿ ಕರೆದರೆ ಆ ಕೂಗು ಲೋಕವೇ ಕೂಗಿ ಕರೆದಂತಾಗುವ – ಎಲ್ಲರನ್ನೂ ಮುಟ್ಟುವ ಸತ್ಯದ ಗುಣ ಅರಿವಿಗೆ ಬರುವುದು. ಮಾತು 'ನಿಜ'ವಾಗಿದ್ದಾಗ ಅದು ಎಲ್ಲರ ಮಾತು. ಮಾತು ತೋರಿಕೆಯಾಗಿದ್ದಾಗ ಅದು ಆಡಿದವನ ಮಾತೂ ಅಲ್ಲ. ಎಲ್ಲರ ಒಳಗಿನ ಮಾತಿಗೆ ಯಾರೂ ನೆಪವಾಗಿ ಒದಗಿ ಬರುವನೋ ಅವನು 'ದೇವರೇ' ಆಗಿರಬಹುದು.

■ ತೋಷ

## ಮಾತೇ ಮುತ್ತು

★ ಕೆಲವರು ನಿಮ್ಮ ಜೀವನದಲ್ಲಿ ಆಶೀರ್ವಾದವಾಗಿ ಬರುತ್ತಾರೆ. ಇನ್ನು ಕೆಲವರು ಪಾಠವಾಗಿ ಕಾಣಿಸಿಕೊಳ್ಳುತ್ತಾರೆ.

—ಮದರ್ ತೆರೆಸಾ

★ ನಾನು ಗೆಲ್ಲಲೇಬೇಕೆಂದಿಲ್ಲ, ಆದರೆ ನಾನು ಸತ್ಯವಂತ ಆಗಿರಬಯಸುವೆ.

—ಅಬ್ರಹಾಂ ಲಿಂಕನ್

★ ನಿಮ್ಮ ಶಬ್ದಗಳನ್ನು ಎತ್ತರಿಸಿ, ಗಂಟಲನ್ನಲ್ಲ. ಮಳೆ ಸುರಿದರೆ ಮಾತ್ರ ಹೂವು ಅರಳುತ್ತದೆ, ಜಡಿಮಳೆಯಿಂದ ಅಲ್ಲ.

—ರೂಮಿ